**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.**

**C.C. 35-24**

ಪಿ.ಡಬ್ಲ್ಯೂ-2

ಸಿ.ಡಬ್ಲ್ಯೂ-1

ಸಾಕ್ಷಿದಾರರ ಹೆಸರು ಃ **ಶ್ರೀಮತಿ ಬಸವಣ್ಣೆವ್ವ ಗುಂಜಳ**

ಗಂಡನ ಹೆಸರು ಃ ಗರಿಬಪ್ಪ

ವಯಸ್ಸು ಃ 52 ವರ್ಷ

ಉದ್ಯೋಗ ಃ ಹೊಲಿಮನೆ - ಖಾಸಗಿ ಕೆಲಸ

ವಾಸಸ್ಥಳ ಃ ಶಿಶುವಿನಹಾಳ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ಗರಿಬಪ್ಪ ನನ್ನ ಗಂಡ. ನನ್ನ ಗಂಡ ಮತ್ತು ನಾನು ಸುಮಾರು 1 ವರೆ ವರ್ಷ ದ ಹಿಂದೆ ಹುಬ್ಬಳ್ಳಿಗೆ ದುಡಿಯಲು ಬಂದಿದ್ದೆವು. ನನ್ನ ಗಂಡ ವಾಚಮನ್ ಕೆಲಸಕ್ಕೆ ಹೋಗುತ್ತಿದ್ದನು. ನಾನು ಹೊಟೇಲ್ ಕೆಲಸಕ್ಕೆ ಹೋಗುತ್ತಿದ್ದೆನು. ನಾವು ಬಸವೇಶ್ವರ ಪಾರ್ಕ ದಲ್ಲಿ ಇದ್ದೆವು. ಕಳೆದ ವರ್ಷ ವಿಜಯದಶಮಿ ಹಬ್ಬವಾದ ನಂತರ ಒಂದು ದಿನ ರಾತ್ರಿ ನಾನು ಮನೆಯಲ್ಲಿದ್ದಾಗ ನನ್ನ ಗಂಡ ಮರಳಿನ ಲಾರಿಯನ್ನುನೋಡಿಕೊಂಡು ಬರಲು ಹಾಗೂ ಅಂಗಡಿಗೆ ಹೋಗುವ ಸಲುವಾಗಿ ಸಂಜೆಃ 6.30 ಗಂಟೆ ಸುಮಾರಿಗೆ ಮನೆಯಿಂದ ಹೊರಗಡೆ ಹೋಗಿರುತ್ತಾರೆ. ನಂತರ ನಮಗೆ ಪರಿಚಯವಿದ್ದ ಮಂಜುನಾಥ ಎನ್ನುವವರು ಒಬ್ಬ ವ್ಯಕ್ತಿಯನ್ನು ನಮ್ಮ ಮನೆಗೆ ಕಳಿಸಿ ಅಪಘಾತವಾದ ವಿಷಯವನ್ನು ತಿಳಿಸಿದರು. ನಂತರ ಆತನೆ ತನ್ನ ವಾಹನದಲ್ಲಿ ನನ್ನನ್ನು ಬಸವೇಶ್ವರ ಪಾರ್ಕ ಹತ್ತಿರ ಸುಳ್ಳದ ರಸ್ತೆಯ ಪ್ರೀತಿ ಹೊಟೇಲ್ ಹತ್ತಿರ ಅಪಘಾತವಾಗಿದ್ದು ಆ ವ್ಯಕ್ತಿ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದನು. ನ ನಾನು ಅಲ್ಲಿಗೆ ಹೋದಾಗ ಅಪಘಾತಪಡಿಸಿದ ಆಟೋದಲ್ಲಿ ಸಾರ್ವಜನಿಕರು ನನ್ನ ಗಂಡನನ್ನು ಹಾಕಿರುತ್ತಾರೆ. ನಾನು ನೋಡಿದಾಗ ನನ್ನ ಗಂಡನಿಗೆ ತಲೆಗೆ ಕಾಲಿಗೆ, ಪೆಟ್ಟಾಗಿತ್ತು. ಆತ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಅಲ್ಲಿದ್ದ ಚಾಸಾ-11 ರವರನ್ನು ವಿಚಾರಣೆ ಮಾಡಿದಾಗ ಚಹಾ ಹೊಟೇಲದಿಂದ ನನ್ನ ಗಂಡ ಹೊರಗಡೆ ಬಂದಾಗ ಸುಳ್ಳ ದ ಕಡೆಯಿಂದ ಶಾಂತಿನಗರದ ಕಡೆಗೆ ಒಬ್ಬ ಆಟೋ ಅತಿ ವೇಗವಾಗಿ ಬಂದು ನನ್ನ ಗಂಡನಿಗೆ ಡಿಕ್ಕಿಪಡಿಸಿರುತ್ತದೆ ಎಂದು ವಿಷಯ ತಿಳಿಸಿರುತ್ತಾರೆ. ಸದರಿ ಅಪಘಾತಪಡಿಸಿದ ವಾಹನದಲ್ಲಿ ನನ್ನ

ಗಂಡನನ್ನು ಹಾಕಿಕೊಂಡು ಕಿಮ್ಸ ಆಸ್ಪತ್ರೆಗೆ ಬಂದು ಚಿಕಿತ್ಸೆಗೆ ದಾಖಲಿಸಿರುತ್ತೇನೆ.



ನಂತರ ಹೊರಗಡೆ ಬಂದು ನೋಡಿದಾಗ ಆಟೋ ಚಾಲಕ ತನ್ನ ಆಟೋದೊಂದಿಗೆ ಪರಾರಿಯಾಗಿದ್ದನು. ಮಾರನೇ ದಿನ ಪೋಲಿಸರಿಗೆ ಹೇಳಿಕೆ ದೂರನ್ನು ನೀಡಿರುತ್ತೇನೆ. ದೂರನ್ನು ನಿಪಿ.6 ಎಂದು, ಸಾಕ್ಷಿ ಸಹಿಯನ್ನು ನಿಪಿ.-6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತನು 3 ದಿನಗಳ ನಂತರ ಬಂದಿದ್ದನು. ನನ್ನ ಗಂಡ ಚಿಕಿತ್ಸೆ ಫಲಕಾರಿಯಾಗದೆ 10-ದಿನಗಳ ನಂತರ ಮರಣ ಹೊಂದಿರುತ್ತಾನೆ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನಿಪಿ.2 ರಲ್ಲಿರುವ ಅಪಘಾತಪಡಿಸಿದ ಆಟೋ ರಿಕ್ಷಾವನ್ನು ನೊಡೀ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ವಿ ಎಸ್ ವಕೀಲರಿಂದಃ**

**ನಾನು** ಅಪಘಾತವಾದಾಗ ಮನೆಯಲ್ಲಿದ್ದೆನು. ನಾನು ಆರೋಪಿಯನ್ನು ಈ ಮೊದಲು ನೋಡಿರುತ್ತೇನೆ. ದೂರನ್ನು ಯಾರು ಬರೆದರು ಎಂದು ಗೊತ್ತಿಲ್ಲ. ದೂರನ್ನು ಪೋಲಿಸರು ಬರೆದುಕೊಂಡರು. ಪೋಲಿಸರು ಹೇಳಿದ್ದಕ್ಕೆ ನಾನೇ ದೂರನ್ನು ನೀಡಿರುತ್ತೇನೆ. ದೂರಿನಲ್ಲಿ ಏನೂ ಬರೆದಿರುತ್ತದೆ ಎಂದು ಗೊತ್ತಿಲ್ಲ, ಪೋಲಿಸರು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ. ಆರೋಪಿ ಹೆಸರು ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಅಪಘಾತ ಮಾಡಿಲ್ಲ ಅಂದರೆ ಸರಿಯಲ್ಲ. ವಾಹನ ಅಪಘಾತದಿಂದ ನನ್ನ ಗಂಡ ಸತ್ತಿಲ್ಲ ಅಂದರೆ ಸರಿಯಲ್ಲ. ಬಿದ್ದು ತಲೆ ಒಡೆದುಕೊಂಡು ಸತ್ತಿದ್ದಾನೆ ಅಂದರೆ ಸರಿಯಲ್ಲ. ಆಟೋ ರಿಕ್ಷಾ ನಂಬರ ಹೇಳಲು ಬರುವುದಿಲ್ಲ. ಅದನ್ನು ಗುರುತಿಸಲು ಆಗುವುದಿಲ್ಲ. ಆರೋಪಿಗೂ ಹಾಗೂ ಅಪಘಾತಕ್ಕೂ ಸಂಬಂಧ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ